ಅವರಿಬ್ಬರು ಮೊಗ್ ಬಾಯಿಗಿಟ್ಟುಕೊಂಡ ಮೇಲೆ ಬ್ರೆಕ್ಟನೂ ಬಿಯರ್ ಹೀರಿದ್ದ. ಅಂಥ ರುಚಿಯಾದ ಬಿಯರನ್ನು ಬ್ರೆಕ್ಟ್ ಯಾವೊತ್ತೂ ಕುಡಿದಿರಲಿಲ್ಲ! ಅರ್ಧ ಮೊಗ್ ಬಿಯರ್ ಖಾಲಿ ಮಾಡಿ ಅನೂಹ್ಯ, "ನಿಮ್ಮ ಒರಿಜಿನಲ್ ಹೆಸರೇನು ಬ್ರೆಕ್ಟ್" ಎಂದು ನಕ್ಕಿದ್ದಳು. ಬ್ರೆಕ್ಟ್ ಬೆಚ್ಚಿಬಿದ್ದಿದ್ದ. ಇಂಥ ಪ್ರಶ್ನೆಯೊಂದು ಎದುರಾಗುತ್ತದೆಂದು ಬ್ರೆಕ್ಟ್ ಭಾವಿಸಿಯೇ ಇರಲಿಲ್ಲ. ಸಣ್ಣದಾಗಿ ಬೆವರತೊಡಗಿದ. "ಇಷ್ಟ ಇಲ್ಲದಿದ್ರೆ ಬೇಡ" ಮತ್ತೆ ನಕ್ಕಿದ್ದಳು. ಮೊಗ್‌ನಲ್ಲಿ ಕಾಲು ಭಾಗದಷ್ಟಿದ್ದ ಬಿಯರನ್ನು ಒಂದೇ ಗುಕ್ಕಿಗೆ ಕುಡಿದ ಬ್ರೆಕ್ಟ್, "ಭರಮಣ್ಣ" ಎಂದು ನಕ್ಕ.

"ಮಿಸ್ಟರ್ ಭರಮಣ್ಣ ಉರೂಫ್ ಬ್ರೆಕ್ಟ್ ನಾನು ಕೂಡ ಎಸ್ಸಿ ಕಣ್ರಿ. ನನ್ನ ಅಮ್ಮ ಬ್ರಾಹ್ಮಿನ್, ಅಪ್ಪ ಎಸ್ಸಿ. ಸೋ ಐಯ್ಯಾಮ್ ವೆರಿಮಚ್ ಎಸ್ಸಿ. ಆದ್ರೆ ನಾನು ಇದುವರೆಗೂ ಯಾವ ಸವಲತ್ತುಗಳನ್ನೂ ಬಳಸಿಕೊಂಡಿಲ್ಲ. ಈ ಕಾರ್ತಿಕ್ ನನ್ನ ಅಮ್ಮನ ಅಣ್ಣನ ಮಗ. ಎರಡು ವರ್ಷಗಳ ಹಿಂದಿನ ಬ್ಯಾಚಿನಲ್ಲಿ ಯುಪಿಎಸ್ಸಿ ಕ್ಲಿಯರ್ ಮಾಡಿ ಕಸ್ಟಮ್ಸ್ ಡಿಪಾರ್ಟಮೆಂಟಿಗೆ ಸೆಲೆಕ್ಟ್ ಆಗಿದ್ದಾನೆ. ತಿಂಗಳ ಹಿಂದೆ ಎಲ್ಲಾ ತರಬೇತಿ ಮುಗಿದು ಮುಂಬಯಿಗೆ ಪೋಸ್ಟಿಂಗ್ ಆಗಿದೆ" ಎಂದು ಹೇಳಿದವಳು ಸಪ್ಲೈರ್ ಕರೆದು ಮತ್ತೆ ಮೂರು ಮೊಗ್ ಬಿಯರ್ ಹೇಳಿದ್ದಳು. ಬ್ರೆಕ್ಟ್ ಎದುರಿಗೆ ಕುಳಿತಿದ್ದ ಕಾರ್ತಿಕನ ಕೈ ಕುಲುಕಿ "ಕಂಗ್ರಾಟ್ಸ್ ಸಾರ್" ಎಂದಿದ್ದ. ಮತ್ತೆ ಅನೂಹ್ಯ ಮುಂದುವರೆಸಿದಳು: "ಬ್ರೆಕ್ಟ್ ಉರೂಫ್ ಭರಮಣ್ಣ ನಾವಿಬ್ಬರೂ ಮೂರು ವರ್ಷಗಳಿಂದಲೂ ಲವ್ ಮಾಡ್ತ ಇದ್ದೀವಿ. ಮುಂದಿನ ತಿಂಗಳು ಮದ್ವೆ. ಇವನು ತರಬೇತಿಯಲ್ಲಿ ಇದ್ದಿದ್ದರಿಂದ ಟೈಮ್ ಪಾಸ್ ಮಾಡಲು ಕನ್ನಡ ಎಂ.ಎ. ಸೇರಿದೆ. ಮದ್ವೆ ಆದ್ಮೇಲೆ ನಾನು ಇವನ ಜೊತೆ ಮುಂಬಯಿಗೆ ಹೋಗ್ಬಿಡ್ತೀನಿ. ಇನ್ನೊಂದು ಇಂಪಾರ್ಟೆಂಟ್ ವಿಷಯ. ನಾನು ಎಸ್ಸಿ, ಕಾರ್ತಿಕ್ ಬ್ರಾಹ್ಮಿನ್. ಸೋ ನಮ್ಮದು ಪ್ಯೂರ್ಲಿ ಇಂಟರ್‌ಕ್ಯಾಸ್ಟ್ ಮ್ಯಾರೇಜ್. ನಿಮ್ಮ ಕತೆ ಓದಿದಾಗ ಅದು ನನ್ನ ನಿಜವಾದ ಬದುಕೇ ಅನ್ನಿಸಿಬಿಡ್ತು. ತುಂಬಾ ಥ್ರಿಲ್ ಆದೆ. ನಿಮ್ಮ ಆಶಯಗಳನ್ನೆಲ್ಲಾ ನಾನು ಫಾಲೋ ಮಾಡ್ತ ಇದ್ದೀನಿ. ನಂಗೆ ನೀವೊಂಥರಾ ಗುರುಗಳೇ ಆಗಿಬಿಟ್ರಿ..." ಅನೂಹ್ಯ, ಕಾರ್ತಿಕ್ ಇಬ್ಬರೂ ನಕ್ಕಿದ್ದರು. ಫಿಶ್ ಕರಿ ರೈಸ್ ಊಟ ಹೇಳಿದ್ದರು. ಕಾರ್ತಿಕ್ ಎಟಿಎಂ ಕಾರ್ಡ್‌ನಲ್ಲಿ ಬಿಲ್ ಕೊಟ್ಟಿದ್ದ. ಹೊರಗೆ ಬಂದಾಗ ಅನೂಹ್ಯ "ಬ್ರೆಕ್ಟ್, ನಾಳೆಯಿಂದ ಕ್ಲಾಸಿಗೆ ಬರೋದಿಲ್ಲ. ಡೈರೆಕ್ಟರ್‌ಗೆ ಫೋನ್ ಮಾಡಿ ಹೇಳಿದ್ದೀನಿ. ನಿಮಗೆ ಕನ್ನಡ ಲಾಂಗ್ವೇಜ್ ಕಮಾಂಡ್ ತುಂಬಾ ಚೆನ್ನಾಗಿದೆ. ಮನಸ್ಸು ಮಾಡಿದ್ರೆ ನೀವೂ ಕೆಎಎಸ್, ಯುಪಿಎಸ್ ಪರೀಕ್ಷೆ ಪಾಸು ಮಾಡಬಹುದು. ಒಂದು ಪ್ರಯತ್ನ ಮಾಡಿ. ಮದುವೆ ಬಹಳ ಸಿಂಪಲ್ಲಾಗಿ ಆಗ್ತಿದ್ದೀವಿ... ಮುಂಬಯಿಯಲ್ಲಿ ಮದುವೆ. ಬೈ ಬೈ..." ಎಂದು ಹೇಳಿ ಕಾರ್ತಿಕನ ಕೈ ಹಿಡಿದು ನಡೆಯತೊಡಗಿದಳು. ಕಾರ್ತಿಕ್ ಕೂಡ ಬ್ರೆಕ್ಟ್ ಕಡೆ ಕೈ ಬೀಸಿ ನಡೆದಿದ್ದ. ಬ್ರೆಕ್ಟನ ತಲೆಯೆಲ್ಲಾ ಖಾಲಿಯಾದಂತೆನಿಸಿ ಒಂದು ಜಂತುವಿನಂತೆ ಮೆಟ್ರೊ ರೈಲು ನಿಲ್ದಾಣದ ಕಡೆ ತೆವಳತೊಡಗಿದ.

## ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.